ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.860/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಬಸಪ್ಪ** | | |
| **ತಂದೆಃಹೆಸರು** | **ಕರಿವೀರಪ್ಪ** | **ಪಿಡಬ್ಲೂಃ** | **1** |
| **ವಯಸ್ಸು** | **66 ವರ್ಷ** | **ಸಿಡಬ್ಲೂಃ** | **1** |
| **ಉದ್ಯೋಗಃ** | **ನಿವೃತ್ತ ಇಂಜಿನಿಯರ್** | | |
| **ವಾಸ ಸ್ಥಳಃ** | **ಕೊಪ್ಪಳ.** | | |

**ದಿನಾಂಕ 30-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ದಿ.26-03-2016 ರಂದು ಸಂ.4-45 ರಿಂದ 5 ಗಂಟೆಯವರೆಗೆ ನಾನು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ, ಆರೋಪಿ ಮಹಾಂತಪ್ಪ ಏಕಾಏಕಿ ನನ್ನ ಚೇಂಬರ್ ಗೆ ನುಗ್ಗಿ, ತನ್ನ ಕಾಲಿನಲ್ಲಿದ್ದ ಚಪ್ಪಲಿಯನ್ನು ತೆಗೆದು ನನ್ನ ತಲೆಗೆ ಹೊಡೆದನು. ಆಗ ನಾನು ಕೈಯನ್ನು ಅಡ್ಡ ತಂದಾಗ ನನ್ನ ಕೈಯಲ್ಲಿದ್ದ ಮೆಟಾಲಿಕ್ ಟೈಟಾನಿಕ್ ಗೋಲ್ಡ್ ಕಲರ್ ವಾಚ್‌ನ ಚೈನ್ ಕಟ್ಟಾಗಿ ಅವರ ಕೈಗೆ ಹೋಯಿತು. ಅದೇ ವಾಚನ್ನು ತೆಗೆದುಕೊಂಡು ನನ್ನ ತಲೆಗೆ ಹೊಡೆದನು, ಆಗ ನನ್ನ ತಲೆಯಿಂದ ರಕ್ತ ಸ್ರಾವ ಆಯಿತು. ಆಗ ನಾನು ನನ್ನ ಹ್ಯಾಂಡ್ ಕರ್ಚೀಫನ್ನು ತೆಗೆದುಕೊಂಡು ನನ್ನ ತಲೆಯನ್ನು ಒತ್ತಿ ಹಿಡಿದೆನು. ಆದರೂ ಸಹ ಅವರು ನನ್ನನ್ನು ಬಿಡದೆ, ನನ್ನ ಅಂಗಿಯನ್ನು ಹಿಡಿದು ಹೊರಗೆ ದರದರನೆ ಎಳೆದುಕೊಂಡು ಬಂದನು, ಆಗ ನಾನು ಅವರಿಂದ ತಪ್ಪಿಸಿಕೊಂಡು ಬಂದು ನಮ್ಮ ಲೆಕ್ಕಾಧಿಕಾರಿಯ ಕೋಣೆಗೆ ಓಡಿ ಹೋದೆನು. ಆದರೂ ಸಹ ನನ್ನನ್ನು ಬಿಡದೆ ನನ್ನ ಬೆನ್ನತ್ತಿ ಆ ಕೋಣೆಗೆ ಬಂದು, ಇನ್ನೊಂದು ಕಾಲಿನ ಚಪ್ಪಲಿಯನ್ನು ತೆಗೆದುಕೊಂಡು ಮತ್ತೆ ಹೊಡೆಯುತ್ತಿದ್ದನು. ಆಗ ಕಛೇರಿಯಲ್ಲಿದ್ದ ನಮ್ಮ ಸಿಬ್ಬಂದಿಯಾದ ಪರಮೇಶ್ವರಪ್ಪ, ಬಸನಗೌಡ, ಮೋಹಿನುದ್ದೀನ್ ಹಾಗೂ ಪ್ರವೀಣ್ ರವರು

ಬಂದು ನನ್ನನ್ನು ಬಿಡಿಸಿಕೊಂಡರು. ಆಗ ಆರೋಪಿ ಇವನನ್ನು ಜೀವಂತ ಬಿಡುವುದಿಲ್ಲ, ಇವನು ಇಲ್ಲಿ ಹೇಗೆ ನೌಕರಿ ಮಾಡುತ್ತಾನೆ ನೋಡಿಯೇ ಬಿಡುತ್ತೇನೆ, ನನಗೆ ಹಿರಿಯ ಅಧಿಕಾರಿಗಳಾದ ಎಸ್ ಇ, ಎಂ, ಡಿ ರವರ ಸಪೋರ್ಟ್ ಇದೆ, ಇವರ ಮೇಲೆ ನಾನು ಅಟ್ರಾಸಿಟಿ ಕೇಸ್ ಸಹ ಮಾಡಿ, ಇವರಿಗೆ ನೌಕರಿ ಕಳೆಯುತ್ತೇನೆ ಎಂದು ಹೇಳಿ ಓಡಿ ಹೋದನು. ಆಗ ನಾನು ಗಾಬರಿಯಿಂದ ಕಚೀಫನ್ನು ತಲೆಗೆ ಹಿಡಿದುಕೊಂಡು ಕೆಲಕಾಲ ನನ್ನ ಚೇಂಬರ್ ನಲ್ಲಿ ಕುಳಿತಿದ್ದೆನು, ಆಗ ನನ್ನ ಸಿಬ್ಬಂದಿಗಳು ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ನನಗೆ ತಲೆಗೆ ಆದ ಗಾಯಕ್ಕೆ ಹೊಲಿಗೆ ಹಾಕಿ, ಅಲ್ಲಿಯೇ ವಿಶ್ರಾಂತಿ ಪಡೆಯಲು ಹೇಳಿದ ಕಾರಣ, ಆಸ್ಪತ್ರೆಯಲ್ಲಿಯೇ ಇದ್ದು, ರಾತ್ರಿ 10-30 ರ ಸುಮಾರಿಗೆ ನಗರ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆನು. ಸಾಕ್ಷಿಯು ದೂರನ್ನು & ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಮರುದಿನ ಬೆ.8 ಗಂಟೆಗೆ ಪೋಲೀಸರು ಪಂಚರೊಂದಿಗೆ ಬಂದಿದ್ದರು, ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿ, ಅಲ್ಲಿದ್ದ ಕೆಲವು ವಸ್ತುಗಳನ್ನು ಜಪ್ತುಪಡಿಸಕೊಂಡಿದ್ದರು. ಸಾಕ್ಷಿಯು ಪಂಚನಾಮೆಯನ್ನು & ಅದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಶರ್ಟ್, ಬಿನಿಯನ್, ಕರ್ಚೀಫ್, ಟೈಟಾನ್ ವಾಚ್, ಬ್ರೌನ್ ಕಲರ್ ಚಪ್ಪಲ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು. ಮಾ. 1 ರಿಂದ 5 ಎಂದು ಗುರುತಿಸಲಾಯಿತು.

ನಂತರ ಪೋಲೀಸರು ನನ್ನ ಹೇಳಿಕೆಯನ್ನು ಪಡೆದರು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ನಾನು ದಿ.01-07-2011 ರಿಂದ ದಿ.01-07-2016 ರವರೆಗೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಎಂದು ಕೆಲಸ ಮಾಡಿದ್ದೆನು. ಆರೋಪಿ ನನಗಿಂತ ಮುಂದಿನಿಂದಲೇ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದನು.

2. ಚಾಸಾ-5 ರವರು ನನ್ನ ಸಂಬಂಧಿಯಲ್ಲ. ಆರೋಪಿ ಮೊದಲು ಗೋರೆಬಾಳದ ಸೆಕ್ಷನ್ ಆಫೀಸರ್ ಎಂದು ಕೆಲಸ ಮಾಡುತ್ತಿದ್ದ. ನಾನು ಆತನನ್ನು ಟ್ರಾನ್ಸಫರ್ ಮಾಡಿಲ್ಲ. ಸೋಲಾರ್ ಸ್ಕೀಮನಲ್ಲಿ ಹಣ ದುರ್ಬಳಕೆ ಮಾಡಿಕೊಂಡ ಬಗ್ಗೆ ನನ್ನನ್ನು 4 ತಿಂಗಳು ಸಸ್ಪೆಂಡ್ ಮಾಡಿದ್ದರು.

3.  ಆರೋಪಿ ಯೂನಿಯನ್ ಲೀಡರ್ ಆಗಿದ್ದರು ಎಂದರೆ ಸರಿ. ನಿಮ್ಮ ಅಧಿಕಾರದಲ್ಲಿ ಯಾವುದೇ ಸಿಬ್ಬಂದಿಗಳಿಗೆ ತೊಂದರೆ ಆದರೆ ಆರೋಪಿ ಬಂದು ಪ್ರಶ್ನಿಸುತ್ತಿದ್ದರು ಎಂದರೆ ಸರಿ. ನೌಕರರ ವರ್ಗಾವಣೆ, ನೌಕರರಿಗೆ ಮನೆಯ ಸೌಲಭ್ಯ ಸಿಗದಾಗ ಆರೋಪಿ ಪ್ರಶ್ನಿಸುತ್ತಿದ್ದರು ಎಂದರೆ ಸರಿ.

4.  ನಿಮ್ಮ ಇಲಾಖೆಯಲ್ಲಿ ಗೋವಿಂದರಾಜು ಎಂಬ ಲೈನ್ ಮ್ಯಾನ್ ಇದ್ದರು, ಅವರನ್ನು 1 ತಿಂಗಳಲ್ಲಿ ಎಷ್ಟು ಭಾರಿ ವರ್ಗಾವಣೆ ಮಾಡಿದ್ದಿರಿ ಎಂದರೆ ಸಾಕ್ಷಿಯು ಇಲ್ಲ, ನಾನು ಮಾಡಿಲ್ಲ ಎನ್ನುತ್ತಾರೆ. 1 ತಿಂಗಳಿನಲ್ಲಿ ಆತನನ್ನು 4 ಬಾರಿ ವರ್ಗಾಯಿಸಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

5.  ಗಲಾಟೆಯಾಯಿತು ಎಂದು ಹೇಳಿದ ದಿನ ಆರೋಪಿ ಡಿವಿಜನಲ್ ಸ್ಟೋರ್, ಸಿಂಧನೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದನು.

**<u>ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**